ದಿನಾಂಕ: ಫೆಬ್ರವರಿ ೦೫, ೨೦೧೪

ಆಯ್ಕೆ ಸಮಿತಿ ಪದ್ಧತಿಯನ್ನು ಪ್ರಧಾನ ಮಂತ್ರಿಗಳು ನಾಶ ಪಡಿಸಿದ್ದಾರೆಯೇ?

–ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಪಕ್ಷಬೇಧ ಮರೆತು ಎಲ್ಲಾ ಸಾರ್ವಜನಿಕ ನೇಮಕಾತಿಗಳು ನಡೆಯಬೇಕೆಂಬ ಅಭಿಮತವಿದೆ. ಸರ್ಕಾರದ ಹುದ್ದೆಗಳನ್ನು ಭರ್ತಿಮಾಡಲು ಕೇವಲ ರಾಜಕೀಯ ನಿಯಂತ್ರಿತ ಕಾರ್ಯಾಂಗವೇ ನಿರ್ಧರಿಸುವ ಪದ್ಧತಿಯಲ್ಲಿ ಜನರಿಗೆ ವಿಶ್ವಾಸವಿಲ್ಲ. ಆದ್ದರಿಂದಲೇ ಹಲವಾರು ನೇಮಕಾತಿಗಳನ್ನು ಆಯ್ಕೆ ಸಮಿತಿಗಳ ಪದ್ಧತಿ ಅನುಸರಿಸಿ ಮಾಡಲಾಗುತ್ತದೆ. ಪ್ರಸ್ತುತ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ(ಎನ್‌ಎಚ್‌ಆರ್‌ಸಿ) ಅಧ್ಯಕ್ಷರು ಮತ್ತು ಸದಸ್ಯರು, ಮುಖ್ಯ ಸಚೇತಕ ಆಯುಕ್ತ(ಸಿವಿಸಿ), ಸಚೇತಕ ಆಯುಕ್ತರು, ಸಿಐಸಿ ಮತ್ತು ಮಾಹಿತಿ ಆಯುಕ್ತರು ಹಾಗೂ ಲೋಕಪಾಲ್ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಯನ್ನು ಆಯ್ಕೆ ಸಮಿತಿ ಮಾಡುತ್ತಿಲ್ಲ. ಪ್ರತಿಯೊಂದು ನೇಮಕಾತಿಗೆ ಆಯ್ಕೆ ಸಮಿತಿಯನ್ನು ರೂಪಿಸಲು ವಿಭಿನ್ನ ಪದ್ಧತಿಗಳನ್ನು ಅನುಸರಿಸಲಾಗುತ್ತದೆ. ಪ್ರತಿಯೊಂದು ನೇಮಕಾತಿಯಲ್ಲೂ ಲೋಕಸಭಾ ವಿರೋಧ ಪಕ್ಷದ ನಾಯಕರ ಪಾತ್ರವಿರುತ್ತದೆ. ಎನ್‌ಎಚ್‌ಆರ್‌ಸಿ ವಿಚಾರದಲ್ಲಿ, ರಾಜ್ಯ ಸಭಾ ವಿರೋಧ ಪಕ್ಷದ ನಾಯಕರೂ ಸಹ ಸಮಿತಿ ಸದಸ್ಯರಾಗಿರುತ್ತಾರೆ.

ಡಾ.ಮನಮೋಹನ್ ಸಿಂಗ್ ಅವರ ಅಧಿಕಾರಾವಧಿ ಅಂತ್ಯ ಸನಿಹವಾಗುತ್ತಿರುವ ಈ ಸಂದರ್ಭದಲ್ಲಿ, ಅವರು ಆಯ್ಕೆ ಸಮಿತಿ ಪದ್ಧತಿಯನ್ನು ಹಾಳು ಮಾಡಿರುವ ಕುರಿತು ಅವಲೋಕಿಸುವ ಅಗತ್ಯವಿದೆ. ನೇರ ನುಡಿಯ ಸೋಗು ಹಾಕಿಕೊಂಡ ಅವರು ಕೇವಲ ರಾಜಕಾರಣಿಯಂತೆ ಮಾತ್ರ ಯೋಚಿಸುವ ವ್ಯಕ್ತಿ ಎಂದು ಸಾಬೀತು ಪಡಿಸಿದ್ದಾರೆ. ಎನ್‌ಡಿಎ ಆಳ್ವಿಕೆಯಲ್ಲಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಪ್ರಧಾನ ಮಂತ್ರಿ ಆಗಿದ್ದ ಸಂದರ್ಭದಲ್ಲಿ ನೇಮಕಾತಿ ವಿಚಾರದಲ್ಲಿ ಕೇವಲ ಒಂದು ಸಂದರ್ಭದಲ್ಲಿ ಇಬ್ಬರು ವಿರೋಧ ಪಕ್ಷದ ನಾಯಕರು ತಮ್ಮ ವಿರೋಧ ವ್ಯಕ್ತಪಡಿಸಿದ್ದರು. ಎನ್‌ಎಚ್‌ಆರ್‌ಸಿ ಅಧ್ಯಕ್ಷರ ಹುದ್ದೆಗೆ ಎನ್‌ಡಿಎ ಮಾಡಿದ ನೇಮಕಾತಿಯನ್ನು ಶ್ರೀಮತಿ ಸೋನಿಯ ಗಾಂಧಿ ಹಾಗೂ ಡಾ.ಮನಮೋಹನ್ ಸಿಂಗ್ ವಿರೋಧಿಸಿದ್ದರು. ನ್ಯಾಯಮೂರ್ತಿ ಜೆ.ಎಸ್.ವರ್ಮ ಅವರನ್ನು ಎನ್‌ಎಚ್‌ಆರ್‌ಸಿ ಅಧ್ಯಕ್ಷರಾಗಿ ನೇಮಿಸುವ ಪ್ರಸ್ತಾಪಕ್ಕೆ ಆಕ್ಷೇಪವೆತ್ತಲು ಡಾ.ಸಿಂಗ್ ಅವರು ತಮ್ಮ ನಾಯಕರೊಂದಿಗೆ ಸಹಮತಿ ಸೂಚಿಸುವಾಗ ಮುಜುಗರಕ್ಕೆ ಒಳಗಾಗಿದ್ದರು. ನ್ಯಾಯಮೂರ್ತಿ ವರ್ಮಾಗಿಂತ ಉತ್ತಮ ಹಿನ್ನಲೆಯ ಮತ್ತೊಬ್ಬ ಅಭ್ಯರ್ಥಿ ಆ ಹಂತದಲ್ಲಿ ಇರಲಿಲ್ಲ. ಕೇವಲ ರಾಜಕೀಯ ಕಾರಣಗಳಿಗಾಗಿ ಅವರ ನೇಮಕಾತಿಗೆ ವಿರೋಧ ವ್ಯಕ್ತಪಡಿಸಲಾಗಿತ್ತು.

ಪ್ರಧಾನ ಮಂತ್ರಿಯಾಗಿ ಒಬ್ಬ ಕಳಂಕಿತ ವ್ಯಕ್ತಿಯನ್ನು ಸಿವಿಸಿಯಾಗಿ ನೇಮಿಸುವ ಬಯಕೆ ಅವರಿಗಿದೆ. ನನ್ನ ಸಹುದ್ಯೋಗಿ ಮತ್ತು ಲೋಕ ಸಭಾ ವಿರೋಧ ಪಕ್ಷದ ನಾಯಕಿ ಶ್ರೀಮತಿ ಸುಶ್ಮಾ ಸ್ವರಾಜ್ ಅವರು ತಮ್ಮ ವಿರೋಧ ವ್ಯಕ್ತ ಪಡಿಸಿದ್ದಾರೆ. ಅವರ ವಿರೋಧವನ್ನು ಎತ್ತಿಹಿಡಿಯಲಾಯಿತು ಹಾಗೂ ಸಿವಿಸಿ ನೇಮಕಾತಿಯನ್ನು ರದ್ದುಗೊಳಿಸಲಾಯಿತು.

ಲೋಕಪಾಲ್ ಕಾನೂನು ಐದನೆ ಸದಸ್ಯರನ್ನು ಆಯ್ಕೆ ಮಾಡುವ ಅಧಿಕಾರವನ್ನು ನಾಲ್ಕು ಸದಸ್ಯರಿಗೆ ನೀಡಿದರೂ, ಸಮಿತಿಯ ಏಳು ಸದಸ್ಯರ ಆಯ್ಕೆಯನ್ನು ನಾಲ್ಕು ಸದಸ್ಯರು ಮಾಡಬೇಕಾದ ಅಧಿಕಾರವನ್ನು ಮೊಟಕುಗೊಳಿಸಲಾಗಿದೆ. ರಾಜೀವ್ ಗಾಂಧಿ ಪ್ರತಿಷ್ಠಾನದ ಆಡಳಿತ ನಿರ್ವಹಿಸುತ್ತಿದ್ದ ಪ್ರತಿಭಾವಂತ ನ್ಯಾಯವಾದಿ ಶ್ರೀ ಮದನ್ ಗೋಪಾಲ್ ಅವರ ಹೆಸರಿತ್ತು. ಪ್ರತಿಭಾವಂತ ನ್ಯಾಯವಾದಿಗಳಲ್ಲಿ ಉತ್ತಮರಾದವರನ್ನು ನೇಮಿಸುವಂತೆ ಶ್ರೀಮತಿ ಸ್ವರಾಜ್ ಸೂಚಿಸಿದ್ದರು ಎಂದು ನನಗೆ ಬಂದ ಸುದ್ದಿ. ಮಾಜಿ ಮುಖ್ಯ ನ್ಯಾಯಮೂರ್ತಿ ಶ್ರೀ ಎಫ್.ಎಸ್.ನಾರಿಮನ್, ಶ್ರೀ ಸೋಲಿ ಸೋರಬ್‌ಜಿ, ಶ್ರೀ ಕೆ.ಪರಸರಣ್ ಹಾಗೂ ಶ್ರೀ ಹರೀಶ್ ಸಾಳ್ವೆ ಅವರ ಹೆಸರುಗಳನ್ನು ಅವರು ಸೂಚಿಸಿದ್ದರು. ನ್ಯಾಯಮೂರ್ತಿ ಎಂ ಎನ್ ವೆಂಕಟಾಚಲಯ್ಯ ಹಾಗೂ ಶ್ರೀ ಕೆ ಕೆ ವೇಣುಗೋಪಾಲ್ ಅವರ ಹೆಸರನ್ನು ಶ್ರೀಮತಿ ಸ್ವರಾಜ್ ಒಪ್ಪುವ ಸಾಧ್ಯತೆಯಿತ್ತು. ಆದರೆ ಕೇವಲ ಶ್ರೀ ಪಿ.ಪಿ.ರಾವ್ ಅವರ ಹೆಸರನ್ನು ಮಾತ್ರ ಪರಿಗಣಿಸಲು ಸಾಧ್ಯವೆಂಬ ನಿಲುವನ್ನು ಪ್ರಧಾನ ಮಂತ್ರಿಗಳು ತಾಳಿದರು. ಶ್ರೀಮತಿ ಸ್ವರಾಜ್ ಸೂಚಚಿಸಿದ ಯಾವುದೇ ಹೆಸರುಗಳನ್ನು ಪರಿಗಣಿಸಲಾಗಲಿಲ್ಲ.

ಶ್ರೀ ಪಿ ಪಿ ರಾವ್ ಗೌರವಾನ್ವಿತ ವ್ಯಕ್ತಿಯಾಗಿದ್ದಾರೆ. ಆದರೆ ಅವರ ಹೆಸರನ್ನಷ್ಟೆ ಪರಿಗಣಿಸಲು ಸಾದ್ಯ ಹಾಗೂ ಬೇರೆ ಹೆಸರುಗಳನ್ನು ಸೇರಿಸಲು ಸಾಧ್ಯವಿಲ್ಲವೆಂಬ ಪ್ರಧಾನ ಮಂತ್ರಿಗಳ ಒತ್ತಾಯ ಸಂದೇಹ ಮೂಡಿಸುವಂತಹದು. ಮುಖ್ಯ ನ್ಯಾಯಮೂರ್ತಿ ಅಥವಾ ಅವರ ಪ್ರತಿನಿಧಿಯನ್ನು ಸಮಿತಿಯ ಸದಸ್ಯರನ್ನಾಗಿ ಮಾಡಿದ್ದರೆ ಸಮತೋಲನ ಕಾಪಾಡಬಹುದ್ದಿತ್ತು. ಸಾಮಾನ್ಯವಾಗಿ ತದ್ವಿರುದ್ಧ ಅಭಿಪ್ರಾಯ ಮೂಡಿದಾಗ, ನಾಮಾಂಕಿತ ನ್ಯಾಯಾಧೀಶರು ಎಲ್ಲರ ಒಪ್ಪಿಗೆ ಪಡೆಯಬಲ್ಲ ಮತ್ತೊಬ್ಬ ಪ್ರತಿಭಾವಂತ ವ್ಯಕ್ತಿಯ ಹೆಸರನ್ನು ಸೂಚಿಸುವ ಸಾಧ್ಯತೆಯಿತ್ತು. ಆದರೆ ಹೀಗೆ ಆಗಲಿಲ್ಲ.

ಡಾ.ಸಿಂಗ್ ಅವರ ಪ್ರಧಾನ ಮಂತ್ರಿ ಹುದ್ದೆಯ ಅವಧಿ ಅಂತ್ಯಗೊಳ್ಳಲಿದೆ. ಸಾರ್ವಜನಿಕ ಹುದ್ದೆಗಳಿಗೆ ನೇಮಕಾತಿ ಮಾಡಲು ಅನುಸರಿಸಲಾದ ಆಯ್ಕೆ ಸಮಿತಿ ಪದ್ಧತಿ ಸೇರಿದಂತೆ ಹಲವಾರು ಸಂವೈಧಾನಿಕ ಸಂಸ್ಥೆಗಳನ್ನು ಅವರು ಹಾಳುಮಾಡಿದ್ದಾರೆ. ಲೋಕಪಾಲ್ ನೇಮಕ ಪದ್ಧತಿಯನ್ನು ಹಾಳುಮಾಡುವ ಭರದಲ್ಲಿ ಆಯ್ಕೆ ಸಮಿತಿ ವ್ಯವಸ್ಥೆಗೆ ಕೊಡಲಿ ಪೆಟ್ಟು ನೀಡುವ ಪ್ರಯತ್ನ ಮಾಡಲಾಗುತ್ತಿದೆಯೇ ಎಂದು ಲೋಕಪಾಲ್ ಕಾನೂನು ಕರಡು ಸಿದ್ಧಪಡಿಸುವಲ್ಲಿ ಭಾಗಿಯಾದ ನಾನು ಆತ್ಮಾವಲೋಕನ ಮಾಡಬೇಕಿದೆ. ಲೋಕಪಾಲ್ ನೇಮಕದ ಮುನ್ನವೇ ಲೋಕಪಾಲ ಸಂಸ್ಥೆಯನ್ನು ಪ್ರಧಾನ ಮಂತ್ರಿಗಳು ಹಾಳುಪಡಿಸಿದ್ದಾರೆ.

*****